**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**Criminal Misc. 12/2024** **PW: 1**

ದಿಃ **26.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಎದುರುದಾರರ ಪರ ಶ್ರಿ ಎ ಬಿ ಬಿ ವಕೀಲರಿಂದಃ**

ನಮ್ಮ ಮದುವೆಯನ್ನು ಗುರುಹಿರಿಯರು ನಿಶ್ಚಯ ಮಾಡಿದ್ದು ಎಂದರೆ ಸರಿ. ದಿಃ 24.04.2016 ರಂದು ನಮ್ಮ ಮದುವೆ ಆಗಿದೆ. ನಾನು ಪಿಯುಸಿ ವರೆಗೆ ಓದಿದ್ದೇನೆ. ನನ್ನ ಅರ್ಜಿಯಲ್ಲಿ ನನ್ನ ವಿದ್ಯಾರ್ಹತೆಯ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ. ನನ್ನ ತಂದೆಗೆ ಜಮಿನು ಇದೆ ತಾಯಿ ಮನೆಯಲ್ಲಿ ಇರುತ್ತಾರೆ. ನನಗೆ ಒಬ್ಬ ಸಹೋದರ ಸಹೋದರಿ ಇದ್ದಾರೆ. ನನ್ನ ಅಣ್ಣ ವೈದ್ಯರಿದ್ದಾರೆ. ನನ್ನ ಅಕ್ಕ ಲೆಕ್ಚರರ್ ಇದ್ದಾರೆ. ನನ್ನ ತಂದೆ ತಾಯಿಯ ಮನೆ ಗಾಮನಗಟ್ಟಿಯಲ್ಲಿ ವಾಸವಿದ್ದೇನೆ. ನನ್ನ ಗಂಡನದ್ದು ಪಿಯುಸಿ ಆಗಿದೆ. ನನ್ನ ಗಂಡ ಹೊಲ ಮಾಡುತ್ತಾರೆ. ನನ್ನ ಗಂಡನ ತಂದೆ ತೀರಿಕೊಂಡು ಒಂದು ವರ್ಷದ ಮೇಲೆ ಆಗಿದೆ.

**ಪಾಟಿಸವಾಲಿಗೆ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.